ಅಗತ್ಯಕ್ಕಿಂತ ಹೆಚ್ಚೇ ಬುದ್ಧಿ ಇದೆ ಅಲ್ವಾ? ಅದಕ್ಕೆ ನನಗೆ ಇವೆಲ್ಲಾ ಹೊಳೆಯುತ್ತೆ'.

'ಇರ್ಲಿ ಬಿಡಿ. ಅಂಥಾ ಹುಡುಗ ನನ್ನ ಗಮನಕ್ಕೆ ಬಂದ್ರೆ ತಿಳಿಸ್ತೀನಿ. ಅಂದ ಹಾಗೆ ರಾಮರಾಯ್ರೇ ಈಗ ಇನ್ನೊಂದು ವಿಚಾರ ನೆನಪಿಗೆ ಬಂತು ನೋಡಿ. ನಿಮ್ಮ ಮಗನಿಗೂ ಹುಡುಗೀನ ನೋಡ್ತಾ ಇದೀರಿ ಅಂತ ಗೊತ್ತಾಯ್ತು. ನಮ್ಮ ಕಡೆ ನಿಮ್ಮ ಕಮ್ಯುನಿಟಿಯ ಸುಂದರವಾದ ಒಂದು ಹುಡುಗಿ ಇದ್ದಾಳೆ. ಎಂಬಿಎ ಮಾಡಿಕೊಂಡು ಬೆಂಗಳೂರಿನಲ್ಲಿ ಅದ್ಯಾವ್ದೋ ಬಹುರಾಷ್ಟ್ರೀಯ ಕಂಪೆನೀಲಿ ಕೆಲ್ಸ ಮಾಡ್ತಿದಾಳೆ. ಸುಮಾರು 70 ಸಾವಿರ ಸಂಬಳ ಬರುತ್ತೆ. ನಿಮ್ಮ ಹುಡುಗನಿಗೆ ಹೇಳಿ ಮಾಡಿಸಿದ ಹಾಗಿದೆ ಹುಡುಗಿ.'

ಈ ವಿವರಗಳಿಂದ ರಾಮರಾಯರ ಕಿವಿಗಳು ನೆಟ್ಟಗಾದವು.

'ಹೌದಾ ಕುಶಾಲಪ್ಪನೋರೇ? ಹಾಗಾದ್ರೆ ತಡವೇಕೆ? ಮುಂದುವರಿಸೋಣ ಶುಭಸ್ಯ ಶೀಘ್ರಂ. ಮಗನಿಗೆ ಹುಡುಗಿ ಸಿಕ್ಕಿದರೆ ಅವನ ಮದುವೇನೇ ಮೊದಲು ಮಾಡಿಬಿಡ್ತೇನೆ. ನಾವು ವರದಕ್ಷಿಣೆ ಏನೂ ನಿರೀಕ್ಷಿಸೋದಿಲ್ಲ. ಸರಳವಾಗಿ ಯಾವುದಾದ್ರೂ ಛತ್ರದಲ್ಲಿ ಮದುವೆ ಮಾಡಿಕೊಟ್ರೆ ಸಾಕು. ನಮ್ಮ ಕಡೆ ಒಂದರಿಂದ ಒಂದೂವರೆ ಸಾವ್ರ ಜನ ಬಂದ್ರೆ ಹೆಚ್ಚು. ಇನ್ನು ಅವ್ರು ತಮ್ಮ ಮಗಳಿಗೆ ಏನು ಕೊಡ್ತಾರೋ ಕೊಟ್ಟುಕೊಳ್ಳಲಿ ಬಿಡಿ. ಅದನ್ನ ಬೇಡ ಅನ್ನಲಿಕ್ಕೆ ನಾನ್ಯಾರು?'

'ಅವ್ರು ಅವ್ರ ಮಗಳಿಗೆ ಏನೇ ಕೊಟ್ರೂ ಅದು ನಿಮ್ಮ ಮನೆಗೆ ಸೇರೋದಲ್ವಾ, ರಾಮರಾಯರೇ? ಇದ್ರಲ್ಲಿ ನಿಮ್ಮ ಧಾರಾಳತನ ಏನು ಬಂತು ಹೇಳಿ?'

'ಅಲ್ಲಾ, ಲೋಕಾರೂಢಿ ಹೇಳ್ದೆ ಅಷ್ಟೆ. ಅದು ಅವ್ರ ಇಷ್ಟ ಬಿಡಿ. ಅವ್ರು ಮಗಳು ಚೆನ್ನಾಗಿರಬೇಕಲ್ವಾ?'

'ಅದೆಲ್ಲಾ ಬಿಡಿ. ಹೇಗೋ ಆಗುತ್ತೆ. ಹುಡುಗಿಯ ತಂದೆ ತಾಯಿಯರದ್ದು ಒಂದೇ ಒಂದು ಶರತ್ತು. ಅದನ್ನು ನೀವು ನೆರವೇರಿಸಿ ಕೊಡಲಿಕ್ಕಾಗುತ್ತಾ ಅಂತಾ ಯೋಚಿಸಿ ನೋಡಿ...'

'ಹೌದಾ? ಅದೇನು ಅಂಥಾ ಶರತ್ತು?'

'ಹುಡುಗೀಗೆ ಅತ್ತೆ ಮಾವ ಇರಬಾರದಂತೆ ಅಷ್ಟೇ.'

'ಅಂದ್ರೆ ನಾವು ಸಾಯಬೇಕಂತಾ?!'

'ಅದು ನಿಮ್ಮ ಇಷ್ಟ!'

ಮರು ಮಾತಾಡದೆ ರಾಮರಾಯರು ಕುಳಿತಲ್ಲಿಂದ ಎದ್ದು ತಮ್ಮ ದಾರಿ ಹಿಡಿದರು. ಕುಶಾಲಪ್ಪನವರು ಕೊಡಗಿನ ತಮ್ಮ ವಿಶಿಷ್ಟ ಮೀಸೆಯೊಳಗೆ ನಕ್ಕಿದ್ದನ್ನು ರಾಮರಾಯರು ಗಮನಿಸಲಿಲ್ಲ.

## ಜಿ.ವಿ. ಗಣೇಶಯ್ಯ

ಶೃಂಗೇರಿಯ ಕೊಪ್ಪ ತಾಲ್ಲೂಕಿನ ಸಮೀಪದ ಹಳ್ಳಿಯೊಂದರಲ್ಲಿ ಜನಿಸಿದ ಗಣೇಶಯ್ಯ ಪ್ರಸ್ತುತ ನೆಲೆಸಿರುವುದು ಮೈಸೂರಿನಲ್ಲಿ. ಅವರು ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಕನ್ನಡದ ಅನೇಕ ದಿನಪತ್ರಿಕೆ ಹಾಗೂ ವಾರಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟಗೊಂಡಿವೆ. ಸುಮಾರು 22 ಪುಸ್ತಕಗಳ ಲೇಖಕ ಗಣೇಶಯ್ಯ.